## ಗರ್ಭಾವಸ್ಥೆಯಲ್ಲಿ ಮಾಸ್ಟೆಕ್ಟೊಮಿ

ಗರ್ಭಾವಸ್ಥೆಯ ಯಾವ ಹಂತದಲ್ಲಿ ಕ್ಯಾನ್ಸರ್ ಪತ್ತೆ ಆಗುತ್ತದೆ ಎನ್ನುವುದರ ಮೇಲೆ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಸ್ತನ ಕ್ಯಾನ್ಸರ್ ನೇರವಾಗಿ ಹಾರ್ಮೋನುಗಳಿಗೆ ಸಂಬಂಧಿಸಿರುತ್ತದೆ. ಗರ್ಭಾವಸ್ಥೆಯಲ್ಲಿ ಅತೀ ಹೆಚ್ಚು ಮತ್ತು ವೇಗವಾಗಿ ಹಾರ್ಮೋನು ವ್ಯತ್ಯಾಸ ಆಗುವುದರಿಂದ ಆ ಸಂದರ್ಭದಲ್ಲಿ ಕ್ಯಾನ್ಸರ್ ಪತ್ತೆಯಾದರೆ ಅದು ಬಹಳ ಜಟಿಲ ಸಮಸ್ಯೆ ಆಗುತ್ತದೆ. ಗರ್ಭಾವಸ್ಥೆಯ ಮೂರು ತಿಂಗಳ ಒಳಗೆ ಇದು ಪತ್ತೆಯಾದರೆ ಗರ್ಭಪಾತ ಮಾಡಲಾಗುತ್ತದೆ. ಏಳು ತಿಂಗಳ ಒಳಗೆ ತಿಳಿದು ಬಂದಲ್ಲಿ ಮಗುವನ್ನು ಹೊರಗೆ ತೆಗೆದು ಚಿಕಿತ್ಸೆ ನೀಡಬೇಕಾಗುತ್ತದೆ. ಮಾಸ್ಟೆಕ್ಟೊಮಿ ಮಾತ್ರವಲ್ಲ, ಸ್ತನ ಕ್ಯಾನ್ಸರ್‌ಗೆ ಸಂಬಂಧಿಸಿದ ಯಾವುದೇ ಶಸ್ತ್ರಚಿಕಿತ್ಸೆ ಮಾಡಬೇಕಾದರೂ ಇದೇ ಮಾರ್ಗವನ್ನು ಅನುಸರಿಸಲಾಗುತ್ತದೆ.

## ಸ್ತನ ಮರುಜೋಡಣೆ

ಮಾಸ್ಟೆಕ್ಟೊಮಿ ಶಸ್ತ್ರಚಿಕಿತ್ಸೆಯ ನಂತರ ಹೆಚ್ಚಿನ ಮಹಿಳೆಯರು ಸ್ತನ ಮರುಜೋಡಣೆಯ ಶಸ್ತ್ರಚಿಕಿತ್ಸೆಗೆ ಒಳಗಾಗುತ್ತಾರೆ. ಮಾಸ್ಟೆಕ್ಟೊಮಿ ಶಸ್ತ್ರಚಿಕಿತ್ಸೆಯಾದ ಕೂಡಲೇ ಅಥವಾ ಕೆಲ ದಿನಗಳ ವಿರಾಮದ ನಂತರ ಈ ಶಸ್ತ್ರಚಿಕಿತ್ಸೆಗೆ ಮುಂದಾಗಬಹುದು. ಈ ಶಸ್ತ್ರಚಿಕಿತ್ಸೆಯ ನಂತರ ಸ್ತನವನ್ನು ಮೊದಲಿನ ಗಾತ್ರ ಹಾಗೂ ಆಕಾರಕ್ಕೆ ಸರಿ ಹೊಂದುವಂತೆ ಮರು ಜೋಡಣೆ ಮಾಡಲಾಗುತ್ತದೆ. ಸ್ತನಕ್ಕೆ ಅದರದೇ ಆದ ನೈಸರ್ಗಿಕ ರೂಪ ನೀಡುವ ಸಲುವಾಗಿ ತೊಟ್ಟಿನ ಸುತ್ತ ಇರುವ ಕಪ್ಪು ವರ್ತುಲವನ್ನು ಸಹ ಯಥಾಪ್ರಕಾರ ರೂಪಿಸಲಾಗುತ್ತದೆ. ಲಂಪೆಕ್ಟೊಮಿ ಶಸ್ತ್ರಚಿಕಿತ್ಸೆಗೆ ಒಳಗಾದವರು ಈ ಶಸ್ತ್ರಚಿಕಿತ್ಸೆಗೆ ಒಳಗಾಗುವ ಅಗತ್ಯ ಇರುವುದಿಲ್ಲ.

ಸ್ತನ ಮರುಜೋಡಣೆಯ ಏಕೈಕ ಉದ್ದೇಶ ಎಂದರೆ ಹೆಣ್ಣಿನ ಸೌಂದರ್ಯಕ್ಕೆ ಕುಂದು ಬರದಿರಲಿ ಎನ್ನುವುದು. ಹೆಣ್ಣಿನ ಆತ್ಮವಿಶ್ವಾಸ ಕುಗ್ಗದಂತೆ ಇದು ನೋಡಿಕೊಳ್ಳುತ್ತದೆ. ಸ್ತನ ಮರು ಜೋಡಣೆಯ ಶಸ್ತ್ರಚಿಕಿತ್ಸೆಯು ಅನೇಕ ವೈಯಕ್ತಿಕ ಮತ್ತು ವೈದ್ಯಕೀಯ ಅಂಶಗಳ ಮೇಲೆ ನಿರ್ಧಾರವಾಗುತ್ತದೆ. ಅವುಗಳೆಂದರೆ:

* ಮಾಸ್ಟೆಕ್ಟೊಮಿ ನಂತರದ ನಿಮ್ಮ ಒಟ್ಟಾರೆ ಆರೋಗ್ಯ
* ಸ್ತನ ಕ್ಯಾನ್ಸರ್‌ನ ಹಂತ
* ನಿಮ್ಮ ಸ್ತನದ ಮೂಲ ಗಾತ್ರ
* ಮರುಜೋಡಣೆ ಮಾಡಬೇಕಿರುವ ಸ್ತನದ ಗಾತ್ರ
* ಲಭ್ಯವಿರುವ ಅಂಗಾಂಶಗಳ ಪ್ರಮಾಣ

## ಸ್ತನ ಮರುಜೋಡಣೆಯ ಅಪಾಯಗಳು:

ರಕ್ತಸ್ರಾವ
ಸ್ತನದಲ್ಲಿ ದ್ರವ ಜಮಾವಣೆ, ಊತ ಹಾಗೂ ನೋವು
ಸೋಂಕು
ಅಂಗಾಂಶಗಳ ಸಾವು (ನೆಕ್ರೋಸಿಸ್)
ಅತಿಯಾದ ದಣಿವು
ಜೋಡಣೆಯ ಸಮಸ್ಯೆಗಳು

## ಕ್ಯಾನ್ಸರ್ ಮರುಕಳಿಸುವ ಸಾಧ್ಯತೆ

ಸ್ತನ ಮರುಜೋಡಣೆಗೂ ಕ್ಯಾನ್ಸರ್ ಮರುಕಳಿಸುವುದಕ್ಕೂ ಸಂಬಂಧವಿಲ್ಲ ಎನ್ನುತ್ತವೆ ಅಧ್ಯಯನಗಳು. ಒಂದು ವೇಳೆ ಮರುಜೋಡಣೆಯ ನಂತರ ಕ್ಯಾನ್ಸರ್ ಮರುಕಳಿಸಿದರೂ ಅದಕ್ಕೆ ಮರುಜೋಡಣೆಯೇ ಕಾರಣವಾಗಿರುವುದಿಲ್ಲ. ಹೀಗೆ ಮರುಕಳಿಸಿದ ಕ್ಯಾನ್ಸರ್‌ಗೆ ಕೀಮೊಥೆರಪಿ ಹಾಗೂ ರೇಡಿಯೇಶನ್ ಚಿಕಿತ್ಸೆಗೆ ಮರುಜೋಡಣೆ ಮಾಡಲಾದ ಸ್ತನಗಳು ಯಾವುದೇ ತೊಂದರೆಯನ್ನು ಒಡ್ಡಲಾರವು.

ಆದರೂ ಮಾಸ್ಟೆಕ್ಟೊಮಿ ಒಳಗಾದ ಎಲ್ಲರೂ ಮರುಜೋಡಣೆಯನ್ನು ಬಯಸುವುದಿಲ್ಲ. ಕೆಲವರು ಈ ಸ್ಥಿತಿಯಿಂದ ಉಂಟಾದ ಬದಲಾವಣೆಯನ್ನು ಒಪ್ಪಿಕೊಂಡು ಆರೋಗ್ಯದ ಕಡೆ ಗಮನ ಕೊಡುತ್ತಾರೆ.

ತೀರ ಇತ್ತೀಚಿನವರೆಗೂ ಮಾಸ್ಟೆಕ್ಟೊಮಿ ಎಂದೊಡನೆ ಬೆಚ್ಚಿಬೀಳುತ್ತಿದ್ದ ಸ್ತನ ಕ್ಯಾನ್ಸರ್ ರೋಗಿಗಳು ಈಗ ಮೊದಲ ಭೇಟಿಯಲ್ಲೇ ಮಾಸ್ಟೆಕ್ಟೊಮಿ ಬಗ್ಗೆ ಮಾತನಾಡುತ್ತಿದ್ದಾರೆ. ಮಾಸ್ಟೆಕ್ಟೊಮಿ ಶಸ್ತ್ರಚಿಕಿತ್ಸೆಯನ್ನು ಸೂಚಿಸುತ್ತಿದ್ದಂತೆ 'ಓ



ಅದಾ ಏಂಜಲಿನಾ ಸರ್ಜರಿ... ಸರಿ ಮಾಡ್ರಿ...' ಎನ್ನುವ ಮಟ್ಟಕ್ಕೆ ಬಂದಿದ್ದಾರೆ. ಯಾವ ವೈದ್ಯರು ಎಷ್ಟೇ ಎಚ್ಚರಿಕೆ ಬಿತ್ತಿದರೂ ಸಂಕೋಚದ ಕೋಟೆಯಿಂದ ಆಚೆ ಬರದ ಹೆಣ್ಣಮಕ್ಕಳು ನಿಸ್ಸಂಕೋಚವಾಗಿ ಸ್ತನ ಕ್ಯಾನ್ಸರ್ ಬಗ್ಗೆ ಮಾತನಾಡುವಂತೆ ಮಾಡಿದ ಏಂಜಲಿನಾ, ನೀನೆಲ್ಲೇ ಇದ್ದರೂ ನಿನಗೆ ನಮ್ಮ ನಮನ...

ತಮ್ಮ ದೇಹದಲ್ಲಿ ಸ್ತನ ಮತ್ತು ಅಂಡಾಶಯ ಸೇರಿದಂತೆ ಯಾವುದೇ ರೀತಿಯ ಕ್ಯಾನ್ಸರ್ ತರಬಲ್ಲ 'ಬಿಆರ್‌ಸಿಎ 1' ರೋಗಪೀಡಿತ ಜೀನ್ ಪತ್ತೆಯಾದಲ್ಲಿ ಅಂತಹ ಮಹಿಳೆಗೆ ಹಲವು ರೀತಿಯ ಕ್ಯಾನ್ಸರ್ ನಿರ್ಬಂಧಿತ ಶಸ್ತ್ರಚಿಕಿತ್ಸೆಗಳ ಆಯ್ಕೆ ಇರುತ್ತದೆ. ಆರೋಗ್ಯಕರ ಸ್ತನಗಳನ್ನು ತೆಗೆದು ಹಾಕುವ ಮೂಲಕ ಸಂಭವನೀಯ ಕ್ಯಾನ್ಸರ್ ಅನ್ನು ತಡೆಗಟ್ಟುವ ಕ್ರಮ ಕೈಗೊಂಡ ಏಂಜಲಿನಾ ಜೋಲಿ ಅವರ ನಿರ್ಧಾರ ಇದೇ ಮೊದಲೇನೂ ಅಲ್ಲ. ಆದರೆ ಅಂತಹ ನಿರ್ಧಾರ ತೆಗೆದುಕೊಂಡವರ ಸಾಲಿನಲ್ಲಿ ಜೋಲಿ ವಿಶೇಷವಾಗಿ ಕಾಣುತ್ತಾರೆ.

(ಲೇಖಕಿ ಎಚ್‌ಜಿಸಿ ಗ್ರಂಥಿವಿಜ್ಞಾನ ಶಸ್ತ್ರಚಿಕಿತ್ಸೆಯ ಸಲಹೆಗಾರರು. ಸಂಪರ್ಕಕ್ಕೆ: 080-43485555)